ದಿನಾಂಕಃ 31-10-2022

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎನ್.ಎಸ್ ವಕೀಲರಿಂದಃ-**

ಮೃತ ವಾದಿಗೆ ನನ್ನನ್ನು ಹೊರತುಪಡಿಸಿ ಬೇರೆ ಯಾವುದೇ ವಾರಸುದಾರರು ಇರುವುದಿಲ್ಲ ಎಂದರೆ ನಿಜ. ನನ್ನ ಗಂಡನಾದ ಮೃತ ವಾದಿಗೆ 3 ಜನ ಸಹೋದರರು ಮತ್ತು ಒಬ್ಬಳು ಸಹೋದರಿ ಇರುತ್ತಾರೆ. ಅವರೆಂದರೆ

1 ನೇ ರತ್ನಮ್ಮ, 2 ನೇ ಚಂದ್ರಶೇಖರ ಸ್ವಾಮಿಗಳು, 3 ನೇ ಶಿವಸ್ವಾಮಿಗಳು, 4 ನೇ ಪುಟ್ಟಣ್ಣ (ಪೌತಿ), 5 ನೇ ಮೃತ ವಾದಿ ಇರುತ್ತಾರೆ. ಎಲ್ಲರೂ ಕೂಡ ಪ್ರತ್ಯೇಕವಾಗಿರುತ್ತಾರೆ. ರುದ್ರಾಣಮ್ಮ ಇವರು ನನ್ನ ಗಂಡನ ತಾಯಿಯಾದ ಸರ್ವಮಂಗಳ ಇವರ ಚಿಕ್ಕಮ್ಮ ಇರುತ್ತಾರೆ. ಅಂದರೆ ರುದ್ರಾಣಮ್ಮ ನನ್ನ ಗಂಡನಿಗೆ ಚಿಕ್ಕಅಜ್ಜಿ ಇರುತ್ತಾರೆ. ರುದ್ರಾಣಮ್ಮ ಇವರಿಗೆ ಒಟ್ಟು 30 ಎಕರೆ ಜಮೀನು ಇತ್ತು ಎಂದು ತಿಳಿದುಬಂದಿರುತ್ತದೆ. ರುದ್ರಾಣಮ್ಮ ಮರಣಿಸುವ ಸಮಯದಲ್ಲಿ ಅವರ ಹೆಸರಿಗೆ 3 ಎಕರೆ 19 ಗುಂಟೆ ಜಮೀನು ಇತ್ತು. ರುದ್ರಾಣಮ್ಮ ಇವರಿಗೆ ಸರ್ವೆ ನಂ. 126 ರಲ್ಲಿ 5 ಎಕರೆ 8 ಗುಂಟೆ, ಸರ್ವೆ ನಂ.127 ರಲ್ಲಿ 3 ಎಕರೆ 30 ಗುಂಟೆ ಮತ್ತು ಸರ್ವೆ ನಂ.128 ರಲ್ಲಿ 4 ಎಕರೆ 21 ಗುಂಟೆ ಜಮೀನು ಇತ್ತು. ಈ ರೀತಿಯಾಗಿ ಸ್ವತ್ತುಗಳ ಕೈಬರಹ ಪಹಣಿಗಳಲ್ಲಿ ರುದ್ರಾಣಮ್ಮ ಇವರ ಹೆಸರು ನಮೂದು ಇತ್ತು. ನನ್ನ ಲಗ್ನವಾದ ನಂತರ ರುದ್ರಾಣಮ್ಮ ಇವರು ಮರಣ ಹೊಂದುವವರೆಗೆ ಸರ್ವೆ ನಂ.126, 127 ಮತ್ತು 128 ರಲ್ಲಿ ಯಾವುದೇ ಅಳತೆ ಕಾರ್ಯ ಆಗಿರುವುದಿಲ್ಲ.

ರುದ್ರಾಣಮ್ಮ ಬದುಕಿದ್ದ ಸಮಯದಲ್ಲಿ ನಂ.126, 127 ಮತ್ತು 128 ರಲ್ಲಿಯ ಸ್ವತ್ತುಗಳನ್ನು ನನ್ನ ಗಂಡ ಹಾಗೂ ಅವರ ಸಹೋದರರಾದ ಶಿವಸ್ವಾಮಿ ಮತ್ತು ಪುಟ್ಟಣ್ಣ ಇವರುಗಳಿಗೆ ದಿನಾಂಕ 10/04/1963 ರ ನೋಂದಾಯಿತ ದಾನಪತ್ರಗಳ ಮೂಲಕ ಕೊಟ್ಟಿರುತ್ತಾರೆ ಎಂದರೆ ನಿಜ . ನಿ.ಪಿ.1 ದಾಖಲೆಯ ಪ್ರಕಾರ ರುದ್ರಾಣಮ್ಮ ಇವರು ನನ್ನ ಗಂಡನಾದ ಮೃತ ವಾದಿಗೆ ಸರ್ವೆ ನಂ.127 ರಲ್ಲಿಯ 3 ಎಕರೆ 31 ಗುಂಟೆ ಸ್ವತ್ತನ್ನು ದಾನವಾಗಿ ಕೊಟ್ಟರು ಎಂದರೆ ನಿಜ. ರುದ್ರಾಣಮ್ಮ ಇವರ ಹೆಸರಿನಿಂದ ಪಹಣಿ ದಾಖಲೆಗಳಲ್ಲಿ ನಮೂದಿದ್ದ ವಿಸ್ತೀರ್ಣದ ಪ್ರಕಾರ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ನನ್ನ ಗಂಡನ ಹೆಸರಿಗೆ ದಾನಪತ್ರವಾದ ನಂತರ ನನ್ನ ಗಂಡ ಜಮೀನನ್ನು ಅಳತೆ ಮಾಡಿಸಿರುವುದಿಲ್ಲ. ದಾನಪತ್ರ ಬರೆದುಕೊಟ್ಟ ನಂತರ ಸರ್ವೆ ನಂಬರ್ ಪ್ರಕಾರ ನನ್ನ ಗಂಡ, ಪುಟ್ಟಣ್ಣ ಮತ್ತು ಶಿವಸ್ವಾಮಿ ಇವರು ಸ್ವತ್ತುಗಳನ್ನು ಅನುಭವಿಸುತ್ತಾ ಬಂದಿರುತ್ತಾರೆ.

1963 ರಿಂದ 2016 ರವರೆಗೆ ಸರ್ವೆ ನಂ.126, 127, 128 ಸ್ವತ್ತುಗಳ ಸ್ವಾಧೀನದಾರರ ಮಧ್ಯ ಸ್ವಾಧೀನ ಮತ್ತು ಅನುಭವಕ್ಕೆ ಸಂಬಂಧಪಟ್ಟಂತೆ ಯಾವುದೇ ತಕರಾರುಗಳು ಆಗಿಲ್ಲ ಎಂದರೆ ನಿಜ. ದಾನಪತ್ರಗಳ

ಮೂಲಕ ಖಾತೆಯಾದ ನಂತರ ಪುಟ್ಟಣ್ಣರವರ ತಮಗೆ ಸೇರಿದ ಜಮೀನನು ಮಾರಾಟ ಮಾಡಿದರು ಎಂದರೆ ನಿಜ. ದಾನಪತ್ರದ ಮೂಲಕ ಪುಟ್ಟಣ್ಣನಿಗೆ 5 ಎಕರೆ 8 ಗುಂಟೆ, ಶಿವಸ್ವಾಮಿಗೆ 4 ಎಕರೆ 21 ಗುಂಟೆ ಹಾಗೂ ನನ್ನ ಗಂಡನಿಗೆ 3 ಎಕರೆ 31 ಗುಂಟೆ ಸ್ವತ್ತು ಬಂದಿತ್ತು ಎಂದರೆ ನಿಜ.

ಸರ್ವೆ ನಂ.126 ರ ಸ್ವತ್ತು ಕಾವೇರಿ ನದಿಯ ದಡದ ಕಡೆ ಇದ್ದು ಅದನ್ನು ಶಿವಸ್ವಾಮಿ ಇವರು ಸ್ವಾಧೀನ ಹೊಂದಿರುತ್ತಾರೆ ಎಂದರೆ ನಿಜ. ಅದರ ನಂತರದ ಜಮೀನು ಅಂದರೆ ಸರ್ವೆ ನಂ. 127 ರಲ್ಲಿಯ 3 ಎಕರೆ 31 ಗುಂಟೆ ಜಮೀನು ನನ್ನ ಗಂಡ ಮತ್ತು ನನ್ನ ಸ್ವಾಧೀನದಲ್ಲಿದೆ ಎಂದರೆ ನಿಜ. ಅದಕ್ಕೆ ತಾಗಿಕೊಂಡು ಸರ್ವೆ ನಂ.128 ರಲ್ಲಿ 5 ಎಕರೆ 8 ಗುಂಟೆ ಸ್ವತ್ತಿನಲ್ಲಿ ಪುಟ್ಟಣ್ಣ ಇವರು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿದಾರರು ಸ್ವಾಧೀನದಲ್ಲಿ ಇರುವುದು ನಿಜ ಆದರೆ ವಿಸ್ತೀರ್ಣ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪುಟ್ಟಣ್ಣರವರು ದಿನಾಂಕ 29/07/1998 ರಲ್ಲಿ 1 ಎಕರೆ 28 ಗುಂಟೆ ಸ್ವತ್ತನ್ನು ನಾಗಮ್ಮ ಎನ್ನುವವರಿಗೆ ಕ್ರಯಕ್ಕೆ ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ .

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ ಮೇರೆಗೆ ಮುಂದೂಡಲಾಯಿತು**.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.